# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2(03)

ಸದಸ್ಯರ ಹೆಸರು : ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 27.01.2026

ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ಜಿಲ್ಲೆ ಹುಮನಾಬಾದ್ ಪಟ್ಟಣದ ಶ್ರೀ ನಾಗೇಶ್ವರಿ ಹೋಟೆಲ್ ಆಸ್ತಿ ಸಂಖ್ಯೆ: 21-451 ಮತ್ತು 21-451/1ರಲ್ಲಿ ವಸತಿ ವಿನ್ಯಾಸಕ್ಕೆ ಪರವಾನಿಗೆ ಪಡೆದುಕೊಂಡು ವಾಣಿಜ್ಯ ಸಂಕೀರ್ಣ ನಿರ್ಮಾಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | **ಹೌದು.**<br>ಬೀದರ ಜಿಲ್ಲೆ ಹುಮನಾಬಾದ ಪಟ್ಟಣದ ಶ್ರೀ ನಾಗೇಶ್ವರಿ ಹೋಟೆಲ್ ಆಸ್ತಿ ಸಂಖ್ಯೆ: 21-451ರ ಕಟ್ಟಡ ಪರವಾನಿಗೆಯನ್ನು ಪುಸಹು/ಕಟ್ಟಡ/46/2012-13, ದಿನಾಂಕ: 11.05.2013 ಮತ್ತು ಆಸ್ತಿ ಸಂಖ್ಯೆ: 21-451/1ರ ಕಟ್ಟಡ ಪರವಾನಿಗೆಯನ್ನು ಪುಸಹು/ಕಟ್ಟಡ/140/2015-16, ದಿನಾಂಕ: 23.09.2015ರ ಪ್ರಕಾರ ವಾಸದ ಉದ್ದೇಶಕ್ಕಾಗಿ ಕಟ್ಟಡ ಪರವಾನಿಗೆಯನ್ನು ಪಡೆಯಲಾಗಿದ್ದು, ಎರಡು ಆಸ್ತಿಗಳನ್ನು ಸೇರಿಸಿ ಒಂದೇ ವಾಣಿಜ್ಯ ಉದ್ದೇಶದ ಕಟ್ಟಡವನ್ನು (ನಾಗೇಶ್ವರಿ ಹೋಟೇಲ್) ನಿರ್ಮಾಣ ಮಾಡಲಾಗಿದ್ದು, ಸ್ಥಳ ಪರಿಶೀಲನೆ ವರದಿಯಂತೆ ಕಟ್ಟಡ ಪರವಾನಿಗೆ ಉಲ್ಲಂಘನೆ ಮಾಡಿದ ಆಸ್ತಿ ಸಂಖ್ಯೆ: 21-451 ಮತ್ತು 21-451/1 ಗಳನ್ನು ಅನಧಿಕೃತ ಆಸ್ತಿಗಳೆಂದು ಘೋಷಿಸಲು ನಿಯಮಾನುಸಾರವಾಗಿ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು. |
| ಆ) | ಬಂದಿದ್ದಲ್ಲಿ, ಸರ್ಕಾರ ಅನಧಿಕೃತ ನಿರ್ಮಾಣ ಮಾಡಿರುವ ಕಟ್ಟಡ ಮಾಲೀಕರು ಮತ್ತು ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮವೇನು; | |
| ಇ) | ಅಕ್ರಮವಾಗಿ ನಿರ್ಮಾಣ ಮಾಡಿರುವ ಕುರಿತು ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ವರದಿ ಸಲ್ಲಿಸಿದ್ದರು ಸರ್ಕಾರ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? (ಮಾಹಿತಿ ನೀಡುವುದು) | ಅನಧಿಕೃತ ನಿರ್ಮಾಣದ ಬಗ್ಗೆ ಶ್ರೀ ಸತೀಶ ತಂದೆ ದೇವೀಂದ್ರಪ್ಪಾ, ಸಾ॥ ಹುಮನಾಬಾದ ರವರ ಮಾಹಿತಿ ಹಕ್ಕು ಅರ್ಜಿಗೆ ಮಾಹಿತಿ ಸಂಖ್ಯೆ: ಪುಸಹು/ಮಾಹಅ/2.-58/2024-25 ದಿನಾಂಕ: 31-07-2024ರ ಪ್ರಕಾರ ಮಾಹಿತಿ ನೀಡಿದ ಸಂದರ್ಭದಲ್ಲಿ ಗಮನಕ್ಕೆ ಬಂದಿದ್ದು, ಅಧಿಕಾರಿಗಳಿಂದ ಕೂಲಂಕುಶವಾದ ವರದಿಯನ್ನು ಪಡೆಯಲು ವಿಳಂಬವಾಗಿದ್ದು, ಆಸ್ತಿ ಸಂಖ್ಯೆ: 21-451 ಮತ್ತು 21-451/1 ಗಳನ್ನು ಅನಧಿಕೃತ ಆಸ್ತಿಗಳೆಂದು ಘೋಷಿಸಲು ಸ್ಥಳ ಪರಿಶೀಲನೆ ಮಾಡಿ ಎಲ್ಲಾ ಅಂಶಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.<br><br>ಸದರಿ ಪ್ರಕರಣದ ಬಗ್ಗೆ ಜಿಲ್ಲಾಧಿಕಾರಿಗಳು, ಬೀದರ್ ರವರಿಂದ ಸ್ಪಷ್ಟವಾದ ಮಾಹಿತಿಯನ್ನು ಪಡೆದು, ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು. |

ಇ-ಸಂಖ್ಯೆ: ನಅಇ 30 ಜಿಇಎಲ್ 2026 (ಇ)

( ರಹೀಂ ಖಾನ್ )
ಪೌರಾಡಳಿತ ಮತ್ತು ಹಜ್ ಸಚಿವರು